# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

**Superintending Engineer(Ele)**
**O & M Circle, Keshwapur, Hubballi-23**
**E-mail ID: seehbl.hescom@gmail.com**



Corporate Identity Number (CIN) : U31401KA2002SGC030437


## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

**ಪ್ರಕರಣ ಸಂಖ್ಯೆ:228**

**ವೇದಿಕೆಯ ಸದಸ್ಯರು:**

ಶ್ರೀ **ಎ ಎಚ್ ಕಾಂಬಳೆ,** ಅಧೀಕ್ಷಕ ಇಂಜಿನೀಯರ(ವಿ) ಕಾ ಮತ್ತು ಪಾ ವೃತ್ತ ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.

ಶ್ರೀ **ರಾಮಪ್ಪ. ಎನ್. ಎನ್,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.

ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

**ಶ್ರೀ ಆರ್.ಬಿ ದಲಬಂಜನ,**

(R R No : **117582C**)

**C/o ಶೇಖರ್ ವಿ ತೇಲಕರ್,**

**ಗಣೇಶ ಪೇಟ, ಬಾಕಳೆ ಗಲ್ಲಿ, ಹುಬ್ಬಳ್ಳಿ-20,** .............**ದೂರುದಾರರು.**

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಶಹರ ಉಪವಿಭಾಗ-1,
ಹೆಸ್ಕಾಂ, ಹುಬ್ಬಳ್ಳಿ. ..................**ಪ್ರತಿವಾದಿಗಳು.**

**ಪೀಠಿಕೆ:**

1. ಹುಬ್ಬಳ್ಳಿ ಶಹರದ ಕೇಶ್ವಾಪೂರದ ಪೂಜಾಶ್ರೀ ಪ್ಲಾಜಾದಲ್ಲಿರುವ ಸ್ಥಾವರ ಸಂಖ್ಯೆ: **117582C** ನೇದ್ದ ಸ್ಥಾವರವು **ಶ್ರೀ ಆರ್. ಬಿ ದಲಬಂಜನ ಇವರ ಹೆಸರಿನಲ್ಲಿ ಸಂಪರ್ಕಗೊಂಡಿದ್ದು,** ಸದರಿ ಸ್ಥಾವರಕ್ಕೆ ಫೆಬ್ರವರಿ-2015 ರಿಂದ ಜನೇವರಿ-2017ರ ವರೆಗೆ ಎಮ್.ಎನ್.ಆರ್ ಎಂದು ಪರಿಗಣಿಸಿ ಆಂತರಿಕ ಪರಿಶೋಧನೆಯವರು ಸದರಿ ಅವಧಿಗೆ ಬಿಲ್ ಮಾಡಿ ರೂ. 15,583/- ಕಂದಾಯ ಕೊರತೆ ಮೊತ್ತವನ್ನು ಪಾವತಿಸಲು ಗ್ರಾಹಕರಿಗೆ ತಿಳಿಸಿರುತ್ತಾರೆ. ಇದನ್ನು ಆಕ್ಷೇಪಸಿ **ಶ್ರೀ ಆರ್. ಬಿ ದಲಬಂಜನ** ಇವರು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಕೆಗೆ ದಿನಾಂಕ:15-07-2017 ರಂದು ಪ್ರಕರಣ ದಾಖಲಿಸಿರುತ್ತಾರೆ. ಗ್ರಾಹಕರು ಸದರ ಸ್ಥಾವರದ ಅಂಗಡಿಯನ್ನು ಶ್ರೀ ಶಂಕರ ತಂದೆ ವೆಂಕಟೇಶ ತೇಲಕರ, ಸಾ: ಹುಬ್ಬಳ್ಳಿ ಇವರಿಗೆ ಖರೀದಿಗೆ ಕೊಟ್ಟಿದ್ದು, ಸದರಿ ನಾನು ಖರೀದಿಗೆ ಕೊಟ್ಟ ಅಂಗಡಿಯನ್ನು ದಿನಾಂಕ:01.04.2012 ರಂದು ತಾತ್ಕಾಲಿಕವಾಗಿ ಶ್ರೀಮತಿ ನಿರ್ಮಲಾ ಬೆಂಗಳೂರಕರ ಎಂಬುವವರಿಗೆ ಬಾಡಿಗೆನಾತೆಯಿಂದ ಕೊಟ್ಟಿದ್ದು ಇರುತ್ತದೆ. ಅವರ ಬಾಡಿಗೆ ಅವಧಿ ಮುಗಿದ ನಂತರ ಸ್ವತ: ಖರೀದಿದಾರರು ಫೆಬ್ರುವರಿ-2015 ರ ಕೊನೆಯ ವಾರದಲ್ಲಿ ತಮ್ಮ ಸ್ವಂತಕ್ಕಾಗಿ ಗೋಡಾನ್ ಅಂತ ಉಪಯೋಗಿಸುತ್ತಾ ಬಂದಿರುತ್ತಾರೆ. ಅವರು ಸದರಿ ಗೋಡಾವುನದಲ್ಲಿ ಒಂದು ಎಲ್.ಇ.ಡಿ ಬಲ್ಬನ್ನು ಮಾತ್ರ ಅವಳವಡಿಸಿದ್ದು ಸಂಜೆ ಮತ್ತು ರಾತ್ರಿ ವೇಳೆಯಲ್ಲಿ ದಾಸ್ತಾನು ಇಡುವ ಸಮಯದಲ್ಲಿ ಹಾಗೂ ತೆಗೆದುಕೊಂಡು ಹೋಗುವ ಸಮಯದಲ್ಲಿ ಮಾತ್ರ ವಿದ್ಯುತ್ ಬಳಕೆ ಮಾಡುತ್ತಿದ್ದರಿಂದ ವಿದ್ಯುತ್ ಬಿಲ್ಲು ಸಹಜವಾಗಿ ಕಡಿಮೆ ಬರಲು ಕಾರಣವಾಗಿರುತ್ತದೆ. ಮಾನ್ಯರು ದಯವಿಟ್ಟು ಕೂಲಂಕುಷವಾಗಿ ಪರಿಶೀಲಿಸಿ ಮಾನ್ಯ ಆಂತರಿಕ ತನಿಖಾಧಿಕಾರಿಗಳು ಕಂದಾಯ ಕೊರತೆ ಅಂತಾ ಆಕರಿಸಿದ ಮೊತ್ತ ರೂ 15583/- ಗಳನ್ನು ರದ್ದುಪಡಿಸಿ ಬಳಕೆ ಮಾಡಿದ ಪ್ರಕಾರ ಬಿಲ್ಲನ್ನು ತುಂಬಲು ಅನುವುಮಾಡಿಕೊಡಬೇಕೆಂದು ಗ್ರಾಹಕರು ವೇದಿಕೆಗೆ ವಿನಂತಿಸಿಕೊಂಡಿರುತ್ತಾರೆ.

.....2

2. ಸ್ಥಾವರ ಸಂಖ್ಯೆ: 117582C ಇದು ಶ್ರೀ ಆರ್.ಬಿ.ದಲಬಂಜನ, ಇವರಿಗೆ ಸಂಬಂಧಿಸಿದ್ದು ಇರುತ್ತದೆ. ಸದರ ಸ್ಥಾವರವು ಫೆಬ್ರುವರಿ–2015 ರಲ್ಲಿ ಪ್ರತಿ ತಿಂಗಳು ಬಳಕೆಗಿಂತ ಕಡಿಮೆ ಬಳಕೆ ತೋರಿಸಿದ್ದು ನಂತರ ಜನೇವರಿ–2015 ರಲ್ಲಿ ಮಾಪಕ ಬದಲಾಯಿಸಲಾಗಿದೆ. ಸದರಿ ಸ್ಥಾವರದ ಬಳಕೆ ಪ್ರಮಾಣ ಮಾಪಕ ಬದಲಾಯಿಸಿದ ನಂತರವು ಶೂನ್ಯ ಬಳಕೆ ದಾಖಲಾಗಿರುತ್ತದೆ. ಮಾರ್ಚ–2015 ರಿಂದ ಜನೇವರಿ–2017 ರ ವರೆಗೆ ಸ್ಥಾವರದ ರೀಡಿಂಗ್ ಶೂನ್ಯ ಬಳಕೆ ಬಂದಿದ್ದರಿಂದ ಕಂದಾಯ ಕೊರತೆ ಮೊತ್ತ ರೂ 15583/– ನ್ನು ಲೆಕ್ಕಾಧಿಕಾರಿ (ಆಂ.ಪ), ರವರು ಕಂಡುಹಿಡಿದು ಬೇಡಿಕೆಗೊಳಿಸಲು ಸೂಚಿಸಿದ್ದರಿಂದ ಫೆಬ್ರುವರಿ–2015 ರಿಂದ ಜನೇವರಿ–2017 ರ ವರೆಗೆ ಕಂದಾಯ ಕೊರತೆ ಮೊತ್ತ ರೂ 15583/– ಆಕರಿಸಲಾಗಿದೆ. ಈ ಕುರಿತು ಈ ಕಛೇರಿ ಪತ್ರ ಸಂಖ್ಯೆ:ಸಕಾನಿಇಂ/ಸಲೆ/ಹಿಸ/17–18/2174 ದಿ:22.06.2017 ರಲ್ಲಿ ಗ್ರಾಹಕರಿಗೆ ಲಿಖಿತ ಪತ್ರದ ಮೂಲಕ ಕಂದಾಯ ಕೊರತೆ ಮೊತ್ತ ರೂ 15583/– ನ್ನು ಪಾವತಿಸಲು ತಿಳಿಸಲಾಗಿದೆ. ಕಾರಣ ಹಿಂಬಾಕಿ ಆಕರಿಸಿರುವುದು ಸರಿ ಇರುತ್ತದೆ. ಎಂದು ಸ.ಕಾ.ನಿ.ಇಂ(ವಿ), ಶಹರ ಉಪ ವಿಭಾಗ–1, ಹೆಸ್ಕಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುತ್ತಾರೆ.

3. ಸದರ ಪ್ರಕರಣವನ್ನು ದಿನಾಂಕ: 21–02–2018 ಮತ್ತು 26–03–2018 ರಂದು ವಿಚಾರಣೆಯನ್ನು ನಡೆಸಲಾಯಿತು. ನಿಗಮದ ಪರವಾಗಿ ಶ್ರೀ ಅಂಜನಪ್ಪ ಬಿ. ಸ.ಕಾ.ನಿ.ಇಂ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ–1, ಹೆಸ್ಕಾಂ, ಹುಬ್ಬಳ್ಳಿ ಹಾಗೂ ಗ್ರಾಹಕರು ಹಾಜರಿದ್ದರು.

## ಶ್ರೀ ಆರ್ ಬಿ ಧಲಬಂಜನ, ಹುಬ್ಬಳ್ಳಿ ಇವರ (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ

ವಿಷಯ: ಆರ್ ಆರ್ ನಂ:117582C ನೇದ್ದಕ್ಕೆ ಸಂಬಂಧಿಸಿದಂತೆ ಆಕರಿಸಲ್ಪಟ್ಟ ಕಂದಾಯ ಕೊರತೆ ರದ್ದುಗೊಳಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಗೆ ಸಹಿ ಮಾಡಿದ ನಾನು ಆರ್.ಬಿ.ದಲಬಂಜನ, ಸಾ:ಹುಬ್ಬಳ್ಳಿ ತಮ್ಮಲ್ಲಿ ಈ ಮೂಲಕ ನಿವೇದಿಸಿಕೊಳ್ಳುವುದೇನೆಂದರೆ-

ಹುಬ್ಬಳ್ಳಿ ಶಹರ ಕೇಶ್ವಾಪೂರದ ಪೂಜಾಶ್ರೀ ಪ್ಲಾಜಾದಲ್ಲಿರುವ ವಿದ್ಯುತ್ ಮೀಟರ ಆರ್.ಆರ್.ನಂ: 117582C ವುಳ್ಳ ನನ್ನ ಮಾಲ್ಕಿ ಕಬಜಾ ವಹಿವಾಟಿಯುಳ್ಳ ಅಂಗಡಿಯನ್ನು ನಾನು ಶ್ರೀ ಶಂಕರ ತಂದೆ ವೆಂಕಟೇಶ ತೇಲಕರ, ಸಾ: ಹುಬ್ಬಳ್ಳಿ ಇವರಿಗೆ ಖರೀದಿಗೆ ಕೊಟ್ಟಿದ್ದು ಸದರೀಯವರು ಸದರೀ ನಾನು ಖರೀದಿಗೆ ಕೊಟ್ಟ ಅಂಗಡಿಯನ್ನು ದಿನಾಂಕ:01.04.2012 ರಂದು ತಾತ್ಕಾಲಿಕವಾಗಿ ಶ್ರೀಮತಿ ನಿರ್ಮಲಾ ಬೆಂಗಳೂರಕರ ಎಂಬುವವರಿಗೆ ಬಾಡಿಗೆನಾತೆಯಿಂದ ಕೊಟ್ಟಿದ್ದು ಇರುತ್ತದೆ. ಸದರೀ ಬಾಡಿಗೆದಾರರು ತಾವು ಬಳಕೆ ಮಾಡಿದ ವಿದ್ಯುತ್ ಪ್ರಕಾರ ಪ್ರತಿ ತಿಂಗಳು ಬರುವ ಬಿಲ್ಲನ್ನು ತಮ್ಮ ಇಲಾಖೆಗೆ ಭರಣಾ ಮಾಡುತ್ತಾ ಬಂದಿರುತ್ತಾರೆ. ಅವರ ಬಾಡಿಗೆ ಅವಧಿ ಮುಗಿದ ನಂತರ ಸ್ವತ: ಖರೀದಿದಾರರು ಫೆಬ್ರುವರಿ-2015 ರ ಕೊನೆಯ ವಾರದಲ್ಲಿ ತಮ್ಮ ಸ್ವಂತಕ್ಕಾಗಿ ಗೋಡಾನ್ ಅಂತ ಉಪಯೋಗಿಸುತ್ತಾ ಬಂದಿರುತ್ತಾರೆ. ಅವರು ಸದರೀ ಗೋಡಾವುನದಲ್ಲಿ ಒಂದು ಎಲ್.ಇ.ಡಿ ಬಲ್ಬನ್ನು ಮಾತ್ರ ಅಳವಡಿಸಿದ್ದು ಸಂಜೆ ಮತ್ತು ರಾತ್ರಿ ವೇಳೆಯಲ್ಲಿ ದಾಸ್ತಾನು ಇಡುವ ಸಮಯದಲ್ಲಿ ಹಾಗೂ ತೆಗೆದುಕೊಂಡು ಹೋಗುವ ಸಮಯದಲ್ಲಿ ಮಾತ್ರ ವಿದ್ಯುತ್ ಬಳಕೆ ಮಾಡುತ್ತಿದ್ದರಿಂದ ವಿದ್ಯುತ್ ಬಿಲ್ಲು ಸಹಜವಾಗಿ ಕಡಿಮೆ ಬರಲು ಕಾರಣವಾಗಿರುತ್ತದೆ.

ತಮ್ಮ ಇಲಾಖೆಯವರು ಗೋಡಾವುನವನ್ನು ಹಾಗೂ ಅದರಲ್ಲಿ ಅಳವಡಿಸಿರುವ ಎಲ್.ಇ.ಡಿ ಲ್ಯಾಂಪನ್ನು ಪರೀಕ್ಷಿಸಿರುವರಲ್ಲದೇ ಮೀಟರ ಹೆಜ್ಜಿಗೆ ಓಡದೇ ಇರುವದನ್ನು ಸಹ ಪರೀಕ್ಷಿಸಿ ಹೋಗಿರುತ್ತಾರೆ. ಆದಾಗ್ಯೂ ಸಹ ಅವರು ಹೊಸ ಮೀಟರನ್ನು ಅಳವಡಿಸಿ ಹೋಗಿದ್ದು ಸದರೀ ಗೋಡಾವುನದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಕಡಿಮೆ ಇದ್ದುದರಿಂದ ಹೊಸ ಮೀಟರೂ ಸಹ ಹೆಜ್ಜಿಗೆ ಓಡಿರುವದಿಲ್ಲ.

ಸದರೀ ಬಾಡಿಗೆದಾರರು ಅಂಗಡಿಯನ್ನು ದಿನಾಂಕ:28.01.2015 ರಂದು ಖಾಲಿ ಮಾಡಿದ ನಂತರ ಅವರು ಬಳಸಿದ ವಿದ್ಯುತನ್ನು ಮರು ತಿಂಗಳ ಬಂದ ನಂತರ ತುಂಬಿಕೊಡಬೇಕೆಂದು ಅವರಿಗೆ ತಿಳಿಸಿದ್ದು ಅವರು ಫೆಬ್ರುವರಿ ತಿಂಗಳ ಬಿಲ್ಲನ್ನು ಬಂದು ತೆಗೆದುಕೊಂಡು ಹೋಗಿ ಭರಣಾ ಮಾಡಿ ಬಂದಿರುತ್ತಾರೆ. ಸದರಿ ಅಂಗಡಿಯನ್ನು ಫೆಬ್ರುವರಿ ಕೊನೆಯ ವಾರದಲ್ಲಿ ಅವರು ಸ್ವಂತಕ್ಕಾಗಿ ಗೋಡಾವುನ ಅಂತಾ ಉಪಯೋಗಿಸುತ್ತಾ ಬಂದಿರುತ್ತಾರೆ.

....3

ಈ ಪತ್ರದ ಜೊತೆಗೆ ಲಗತ್ತಿಸಿದ Consumer History Statement ಬಾಡಿಗೆದಾರರು ಬಿಟ್ಟು ಹೋದ ಬಗ್ಗೆ ಬಾಡಿಗೆ ಪತ್ರದಲ್ಲಿ ಅವರ ಹಸ್ತಾಕ್ಷರವುಳ್ಳ ವಿವರ ಹಾಗೂ ಬಾಡಿಗೆದಾರರಾದ ಶ್ರೀಮತಿ ನಿರ್ಮಲಾ ಬೆಂಗಳೂರಕರರವರ ಮೊಬೈಲ್ ನಂ:9343434123 ನೇದ್ದವುಗಳನ್ನು ಸಾದರಪಡಿಸುತ್ತಿದ್ದು ಮಾನ್ಯರು ದಯವಿಟ್ಟು ಕೂಲಂಕುಷವಾಗಿ ಪರಿಶೀಲಿಸಿ ಮಾನ್ಯ ಆಂತರಿಕ ತನಿಖಾಧಿಕಾರಿಗಳು ಕಂದಾಯ ಕೊರತೆ ಅಂತಾ ಆಕರಿಸಿದ ಮೊತ್ತ ರೂ 15583/- ಗಳನ್ನು ರದ್ದುಪಡಿಸಿ ಬಳಕೆ ಮಾಡಿದ ಪ್ರಕಾರ ಬಿಲ್ಲನ್ನು ತುಂಬಲು ಅನುವುಮಾಡಿಕೊಡಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ವಿನಂತಿಸುತ್ತೇನೆ.

**ಸ್ಥಾವರ ಸಂಖ್ಯೆ: 117582C ಶ್ರೀ ಪ್ರಕಾಶ ವ್ಹೈ ಪವಾರ, ಇವರ ಪ್ರಕರಣಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಉಪವಿಭಾಗ-1 ಹುಬ್ಬಳ್ಳಿರವರ ಹೇಳಿಕೆ:**

ವಿಷಯ: ಆರ್ ಆರ್ ನಂ:117582C ಗೆ ಆಕರಿಸಿದ ಕಂದಾಯ ಕೊರತೆ ಮೊತ್ತಕ್ಕೆ ದೂರು ಸಲ್ಲಿಸಿರುವ ಕುರಿತು ವರದಿ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಸ್ಥಾವರ ಸಂಖ್ಯೆ: 117582C ಇದು ಶ್ರೀ ಆರ್.ಬಿ.ದಲಬಂಜನ, ಇವರಿಗೆ ಸಂಬಂಧಿಸಿದ್ದು ಇರುತ್ತದೆ. ಸದರ ಸ್ಥಾವರವು ಫೆಬ್ರುವರಿ-2015 ರಲ್ಲಿ ಪ್ರತಿ ತಿಂಗಳು ಬಳಕೆಗಿಂತ ಕಡಿಮೆ ಬಳಕೆ ತೋರಿಸಿದ್ದು ನಂತರ ಜನೇವರಿ-2015 ರಲ್ಲಿ ಮಾಪಕ ಬದಲಾಯಿಸಲಾಗಿದೆ. ಇದನ್ನು ಪರಿಶೀಲಿಸಿದ ಲೆಕ್ಕಾಧಿಕಾರಿ ಆಂತರಿಕ ತನಿಖೆಯವರು ಸರಿಯಾದ ಬಳಕೆ ತೋರಿಸಿದ ತಿಂಗಳುಗಳಾದ ನವೆಂಬರ್-2014 ರಿಂದ ಜನೇವರಿ-2015 ರ ಸ್ಥಾವರದ ಬಳಕೆ ಪ್ರಮಾಣ ಸರಾಸರಿ-85 ಯುನಿಟ್ಸ್ ಇದ್ದುದರಿಂದ, ಫೆಬ್ರುವರಿ-2015 ರಿಂದ ಜನೇವರಿ-2017 ರ ವರೆಗೆ ಕಂದಾಯ ಕೊರತೆ ಮೊತ್ತ ರೂ 15583/- ಆಕರಿಸಲಾಗಿದೆ.

ಈ ಕುರಿತು ಈ ಕಛೇರಿ ಪತ್ರ ಸಂಖ್ಯೆ:ಸಕಾನಿಇಂ/ಸಲೆ/ಹಿಸ/17-18/2174 ದಿ:22.06.2017 ರಲ್ಲಿ ಗ್ರಾಹಕರಿಗೆ ಅಚಿತ ಪತ್ರದ ಮೂಲಕ ಕಂದಾಯ ಕೊರತೆ ಮೊತ್ತ ರೂ 15583/- ನ್ನು ಪಾವತಿಸಲು ತಿಳಿಸಲಾಗಿದೆ. ಕಾರಣ ಹಿಂಬಾಕಿ ಆಕರಿಸಿರುವುದು ಸರಿ ಇರುತ್ತದೆ. ಆದರೆ ಗ್ರಾಹಕರು ದಿ:19.07.2017 ರಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ. ಆದುದರಿಂದ ದಯಾಪರರಿಗೆ ಸ್ಥಾವರ ವಿವರಗಳನ್ನು ಈ ಮೂಲಕ ತಿಳಿಸಲಾಗಿದೆ.

**ಸ್ಥಾವರ ಸಂಖ್ಯೆ: 117582C ಶ್ರೀ ಪ್ರಕಾಶ ವ್ಹೈ ಪವಾರ, ಇವರ ಪ್ರಕರಣಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಉಪವಿಭಾಗ-1 ಹುಬ್ಬಳ್ಳಿರವರ ಮುಂದುವರೆದ ಲಿಖಿತ ಹೇಳಿಕೆ:**

ಸಿ.ಜಿ.ಆರ್.ಎಫ್ ಪ್ರಕರಣ ಸಂಖ್ಯೆ:228 ಕ್ಕೆ ಸಂಬಂಧಿಸಿದಂತೆ, ನಾನು ಶ್ರೀ ಅಂಜಿನಪ್ಪ.ಬಿ ಸಹಾಯಕ, ಕಾರ್ಯನಿರ್ವಾಹಕ ಇಂಜನೀಯರ್(ವಿ), ಕಾರ್ಯ ಮತ್ತು ಪಾಲನೆ ಶಹರ ಉಪವಿಭಾಗ-1, ಹೆಸ್ಕಾಂ, ಹುಬ್ಬಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡುವ ವರದಿ ಏನೆಂದರೆ

ಸ್ಥಾವರ ಸಂಖ್ಯೆ: 117582C ಇದರ ಬಳಕೆಯ ಪ್ರಮಾಣ ಫೆಬ್ರುವರಿ-2015 ರಿಂದ ಜನೇವರಿ-2017 ರ ವರೆಗೆ ಮಾಪಕ ಎಂ.ಎನ್.ಆರ್ ಆಗಿದ್ದರಿಂದ ನವೆಂಬರ್-2014 ರಿಂದ ಜನೇವರಿ-2015 ರ ಮೂರು ತಿಂಗಳ ಬಳಕೆಯ ಸರಾಸರಿ 85 ಇದ್ದುದರಿಂದ ಅದರಂತೆ ನವೆಂಬರ್-2014 ರಿಂದ ಜನೇವರಿ-2015 ವರೆಗೆ ಒಟ್ಟು ಕಂದಾಯ ಕೊರತೆ ಮೊತ್ತ ರೂ 15583/- ನ್ನು ಆಕರಿಸಲಾಗಿದೆ. ಇದು ಸರಿ ಇರುತ್ತದೆ. ದಿನಾಂಕ:19.02.2016 ರಂದು ಮಾಪಕ ಬದಲಾಯಿಸಲಾಗಿದೆ.

ಮಾರ್ಚ-2015 ರಿಂದ ಜನೇವರಿ-2017 ರ ವರೆಗೆ ಸ್ಥಾವರದ ರೀಡಿಂಗ್ ಶೂನ್ಯ ಬಳಕೆ ಬಂದಿದ್ದರಿಂದ ಕಂದಾಯ ಕೊರತೆ ಮೊತ್ತ ರೂ 15583/- ನ್ನು ಲೆಕ್ಕಾಧಿಕಾರಿ (ಆಂ.ಪ), ರವರು ಕಂಡುಹಿಡಿದು ಬೇಡಿಕೆಗೊಳಿಸಲು ಸೂಚಿಸಿದ್ದರಿಂದ ಆಕರಿಸಲಾಗಿದೆ. ಆದರೆ ಸದರಿ ಸ್ಥಾವರದ ಬಳಕೆ ಪ್ರಮಾಣ ಮಾಪಕ ಬದಲಾಯಿಸಿದ ನಂತರವು ಶೂನ್ಯ ಬಳಕೆ ದಾಖಲಾಗಿರುತ್ತದೆ.

....4

## ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ನಿಗಮದ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಹುಬ್ಬಳ್ಳಿ ಶಹರದ ಕೇಶ್ವಾಪೂರದ ಪೂಜಾಶ್ರೀ ಪ್ಲಾಜಾದಲ್ಲಿರುವ ಸ್ಥಾವರ ಸಂಖ್ಯೆ:**117582C** ನೇದ್ದ ಸ್ಥಾವರವು **ಶ್ರೀ ಆರ್. ಬಿ ದಲಬಂಜನ ಇವರ ಹೆಸರಿನಲ್ಲಿ ಸಂಪರ್ಕಗೊಂಡಿದ್ದು,** ಸದರಿ ಸ್ಥಾವರಕ್ಕೆ ಫೆಬ್ರವರಿ-2015 ರಿಂದ ಜನೇವರಿ-2017ರ ವರೆಗೆ ಎಮ್.ಎನ್.ಆರ್ ಎಂದು ಪರಿಗಣಿಸಿ, ಆಂತರಿಕ ಪರಿಶೋಧನೆಯವರು ಸದರಿ ಅವಧಿಗೆ ಬಿಲ್ ಮಾಡಿ ರೂ. 15,583/- ಕಂದಾಯ ಕೊರತೆ ಮೊತ್ತವನ್ನು ಪಾವತಿಸಲು ಗ್ರಾಹಕರಿಗೆ ತಿಳಿಸಿರುತ್ತಾರೆ. ಇದನ್ನು ಆಕ್ಷೇಪಿಸಿ **ಶ್ರೀ ಆರ್. ಬಿ. ದಲಬಂಜನ,** ಇವರು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಕೆಗೆ ದಿನಾಂಕ:15-07-2017 ರಂದು ಪ್ರಕರಣ ದಾಖಲಿಸಿರುತ್ತಾರೆ. ಗ್ರಾಹಕರು ಸದರ ಸ್ಥಾವರದ ಅಂಗಡಿಯನ್ನು ಶ್ರೀ ಶಂಕರ ತಂದೆ ವೆಂಕಟೇಶ ತೇಲಕರ, ಸಾ: ಹುಬ್ಬಳ್ಳಿ ಇವರಿಗೆ ಖರೀದಿಗೆ ಕೊಟ್ಟಿದ್ದು, ಸದರೀ ನಾನು ಖರೀದಿಗೆ ಕೊಟ್ಟ ಅಂಗಡಿಯನ್ನು **ದಿನಾಂಕ:01.04.2012** ರಂದು ತಾತ್ಕಾಲಿಕವಾಗಿ ಶ್ರೀಮತಿ ನಿರ್ಮಲಾ ಬೆಂಗಳೂರಕರ ಎಂಬುವವರಿಗೆ ಬಾಡಿಗೆನಾತೆಯಿಂದ ಕೊಟ್ಟಿದ್ದು ಕಂಡು ಬರುತ್ತದೆ. ಅವರ ಬಾಡಿಗೆ ಅವಧಿ ಮುಗಿದ ನಂತರ ಸ್ವತ: ಖರೀದಿದಾರರು ಫೆಬ್ರುವರಿ-2015 ರ ಕೊನೆಯ ವಾರದಲ್ಲಿ ತಮ್ಮ ಸ್ವಂತಕ್ಕಾಗಿ ಗೋಡಾನ್ ಅಂತ ಉಪಯೋಗಿಸುತ್ತಾ ಬಂದಿರುವುದು ಕಂಡು ಬರುತ್ತದೆ. ಸದರೀ ಗೋಡಾವುನದಲ್ಲಿ ಒಂದು ಎಲ್.ಇ.ಡಿ ಬಲ್ಬನ್ನು ಮಾತ್ರ ಅವಳವಡಿಸಿದ್ದು ಸಂಜೆ ಮತ್ತು ರಾತ್ರಿ ವೇಳೆಯಲ್ಲಿ ದಾಸ್ತಾನು ಇಡುವ ಸಮಯದಲ್ಲಿ ಹಾಗೂ ತೆಗೆದುಕೊಂಡು ಹೋಗುವ ಸಮಯದಲ್ಲಿ ಮಾತ್ರ ವಿದ್ಯುತ್ ಬಳಕೆ ಮಾಡುತ್ತಿದ್ದರಿಂದ ವಿದ್ಯುತ್ ಬಿಲ್ಲು ಸಹಜವಾಗಿ ಕಡಿಮೆ ಬರಲು ಕಾರಣವಾಗಿರುತ್ತದೆ. ಮಾನ್ಯರು ದಯವಿಟ್ಟು ಕೂಲಂಕುಷವಾಗಿ ಪರಿಶೀಲಿಸಿ ಮಾನ್ಯ ಆಂತರಿಕ ತನಿಖಾಧಿಕಾರಿಗಳು ಕಂದಾಯ ಕೊರತೆ ಅಂತಾ ಆಕರಿಸಿದ ಮೊತ್ತ ರೂ.15583/-ಗಳನ್ನು ರದ್ದುಪಡಿಸಿ ಬಳಕೆ ಮಾಡಿದ ಪ್ರಕಾರ ಬಿಲ್ಲನ್ನು ತುಂಬಲು ಅನುವುಮಾಡಿಕೊಡಬೇಕೆಂದು ಗ್ರಾಹಕರು ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡು ಬರುತ್ತದೆ.

2. ಸ್ಥಾವರ ಸಂಖ್ಯೆ: 117582C ಇದು ಶ್ರೀ ಆರ್.ಬಿ.ದಲಬಂಜನ, ಇವರಿಗೆ ಸಂಬಂಧಿಸಿದ್ದು ಇರುತ್ತದೆ. ಸದರ ಸ್ಥಾವರವು ಫೆಬ್ರುವರಿ-2015 ರಲ್ಲಿ ಪ್ರತಿ ತಿಂಗಳು ಬಳಕೆಗಿಂತ ಕಡಿಮೆ ಬಳಕೆ ತೋರಿಸಿದ್ದು, ನಂತರ ಜನೇವರಿ-2015 ರಲ್ಲಿ ಮಾಪಕ ಬದಲಾಯಿಸಿರುವುದು ಕಂಡು ಬರುತ್ತದೆ. ಮಾರ್ಚ-2015 ರಿಂದ ಜನೇವರಿ-2017 ರ ವರೆಗೆ ಸ್ಥಾವರದ ರೀಡಿಂಗ್ ಶೂನ್ಯ ಬಳಕೆ ಬಂದಿದ್ದರಿಂದ ಕಂದಾಯ ಕೊರತೆ ಮೊತ್ತ ರೂ 15583/- ನ್ನು ಲೆಕ್ಕಾಧಿಕಾರಿ (ಆಂ.ಪ), ರವರು ಕಂಡುಹಿಡಿದು ಬೇಡಿಕೆಗೊಳಿಸಲು ಸೂಚಿಸಿರುವುದು ಕಂಡು ಬರುತ್ತದೆ. ಫೆಬ್ರುವರಿ-2015 ರಿಂದ ಜನೇವರಿ-2017 ರ ವರೆಗೆ ಕಂದಾಯ ಕೊರತೆ ಮೊತ್ತ ರೂ 15583/- ಆಕರಿಸಲಾಗಿದೆ. ಈ ಕುರಿತು ಈ ಕಛೇರಿ ಪತ್ರ ಸಂಖ್ಯೆ:ಸಕಾನಿಇಂ/ಸಲೆ/ಹಿಸ/17-18/2174 ದಿ:22.06.2017 ರಲ್ಲಿ ಗ್ರಾಹಕರಿಗೆ ಲಿಖಿತ ಪತ್ರದ ಮೂಲಕ ಕಂದಾಯ ಕೊರತೆ ಮೊತ್ತ ರೂ 15583/- ನ್ನು ಪಾವತಿಸಲು ಗ್ರಾಹಕರಿಗೆ ತಿಳಿಸಿರುವುದು ಕಂಡುಬರುತ್ತದೆ. ಕಾರಣ ಹಿಂಬಾಕಿ ಆಕರಿಸಿರುವುದು ಸರಿ ಇರುತ್ತದೆ. ಎಂದು ಸ.ಕಾ.ನಿ.ಇಂ(ವಿ), ಶಹರ ಉಪ ವಿಭಾಗ-1, ಹೆಸ್ಕಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡು ಬರುತ್ತದೆ.

ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಿದಾಗ ಸ್ಥಾವರಕ್ಕೆ ಫೆಬ್ರವರಿ-2015 ರಿಂದ ಜನೇವರಿ-2017 ಎಂ.ಎನ್.ಆರ್ ಎಂದು ವಿಧಿಸಿರುವ ಕಂದಾಯ ಕೊರತೆ ಮೊತ್ತದ ಬಿಲ್ಲನ್ನು KERC, COS, ರೆಗ್ಯೂಲೇಷನ್ 27.04 ಪ್ರಕಾರ ಗರಿಷ್ಠ ಆರು ತಿಂಗಳ ಅವಧಿಗೆ ಮಿತಿಗೊಳಿಸಿ, ಗ್ರಾಹಕರಿಗೆ ಪರಿಷ್ಕೃತ ಬಿಲ್ಲನ್ನು ನೀಡಿ, ಪಾವತಿಸಿಕೊಳ್ಳುವ/ಹೊಂದಾಣಿಕೆ ಮಾಡಿಕೊಳ್ಳುವ ಕ್ರಮ ಜರುಗಿಸಬೇಕಾಗುತ್ತದೆ.

.....5

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-228/** Cys 778 **ದಿನಾಂಕ:** 11 SEP 2018

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/13-14/ಸಿವೈಎಸ್-769 ದಿ.16.07.2013 ರನ್ವಯ ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/16-17/ಸಿವೈಎಸ್-3851 ದಿ.28.01.2017 ಮತ್ತು ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/15-16/ಸಿವೈಎಸ್-2296 ದಿ.06.10.2015 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ಗ್ರಾಹಕರ ಮನವಿಯನ್ನು ಭಾಗಶಃ ಪುರಸ್ಕರಿಸಲಾಗಿದೆ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-1, ಹೆಸ್ಕಾಂ, ಹುಬ್ಬಳ್ಳಿರವರು KERC, COS, Regulation 27.04 ಪ್ರಕಾರ ಸದರಿ ಸ್ಥಾವರಕ್ಕೆ ವಿಧಿಸಿರುವ ಕಂದಾಯ ಕೊರತೆ ಮೊತ್ತವನ್ನು ಗರಿಷ್ಠ 6 ತಿಂಗಳ ಅವಧಿಗೆ ಪರಿಷ್ಕರಿಸಿ, ಗ್ರಾಹಕರಿಗೆ ಪರಿಷ್ಕೃತ ಬಿಲ್ಲನ್ನು ನೀಡಿ, ಪಾವತಿಸಿಕೊಳ್ಳುವ/ಹೊಂದಾಣಿಕೆ ಮಾಡಿಕೊಳ್ಳು ಕ್ರಮ ಜರುಗಿಸುವುದು.

| | | |
|---|---|---|
| **(ರಾಮಪ್ಪ ಎನ್ ಎನ್)** | **(ಲೀಲಾ ಆರ್ ಹಿರೇಮಠ)** | **(ಎ ಎಚ್ ಕಾಂಬಳೆ)** |
| ಉಪಲೆಕ್ಕ ನಿಯಂತ್ರಣಾಧಿಕಾರಿ ಹಾಗೂ ಗ್ರಾಕುಂಕೊನಿವೇ ಸದಸ್ಯರು ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ | ಆಯೋಗದಿಂದ ನಿಯೋಜಿಸಲಾದ ಸದಸ್ಯರು. | ಅಧೀಕ್ಷಕ ಇಂಜಿನೀಯರ(ವಿ) ಕಾ & ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ ಗ್ರಾ.ಕುಂ.ಕೊ.ನಿ.ವೇದಿಕೆ. |

ಗೆ,

**ಶ್ರೀ ಆರ್ ಬಿ ದಲಭಂಜನ್,**
(**R R No : 117582C**),
**C/o ಶೇಖರ್ ವಿ ತೇಲಕರ್,**
**ಗಣೇಶ ಪೇಟ, ಬಾಕಳೆ ಗಲ್ಲಿ,**
**ಹುಬ್ಬಳ್ಳಿ-20.**

**"ನೊಂದಾಯಿತ ಅಂಚೆ ಮೂಲಕ"**

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಛೇರಿ, ಹುವಿಸಕಂನಿ, ಹುಬ್ಬಳ್ಳಿರವರ ಆದರ ಪೂರ್ವಕ ಮಾಹಿತಿಗಾಗಿ.
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ವಿಭಾಗ, ಹುವಿಸಕಂನಿ., ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ. ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-1, ಹುವಿಸಕಂನಿ., ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮಹಾ ಕಡತ.